# ಕರ್ನಾಟಕವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1543

ಸದಸ್ಯರ ಹೆಸರು : ಶ್ರೀ. ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 11.03.2022.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1. | ರಾಜ್ಯದಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದ ತೆಂಗು ಅಭಿವೃದ್ಧಿ ಮಂಡಳಿಯ ವಿಭಾಗೀಯ ಕಚೇರಿಯನ್ನು ಯಾವ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದೆ; | ರಾಜ್ಯದಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದ ತೆಂಗು ಅಭಿವೃದ್ಧಿ ಮಂಡಳಿಯ ಪ್ರಾದೇಶಿಕ ಕಚೇರಿಯನ್ನು ಬೆಂಗಳೂರಿನ ಹುಳಿಮಾವಿನಲ್ಲಿ ಸ್ಥಾಪಿಸಲಾಗಿರುತ್ತದೆ. |
| 2. | ಈ ಮಂಡಳಿಯ ವತಿಯಿಂದ ರಾಜ್ಯದಲ್ಲಿ ತೆಂಗು ಬೆಳೆಯುವ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಜಿಲ್ಲೆಗಳ ತೆಂಗು ಅಭಿವೃದ್ಧಿಗೆ ಕೈಗೊಂಡಿರುವ ಯೋಜನೆಗಳಾವುವು; ಮತ್ತು ಈ ಯೋಜನೆಗಳಡಿಯಲ್ಲಿ ಬೆಳೆಗಾರರಿಗೆ ಫಸಲ್ ಭೀಮಾ ಯೋಜನೆಯ ನ್ನೊಳಗೊಂಡಂತೆ ದೊರೆಯುತ್ತಿರುವ ಸೌಲಭ್ಯಗಳೇನು; (ಜಿಲ್ಲಾವಾರು ವಿವರ ನೀಡುವುದು) | ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯದಲ್ಲಿ ತೆಂಗು ಬೆಳೆಯುವ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಜಿಲ್ಲೆಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ.<br>• ತೆಂಗು ಮರುನಾಟಿ ಹಾಗೂ ಪುನಃಶ್ಚೇತನ ಕಾರ್ಯಕ್ರಮ.<br>• ತೆಂಗು ಪ್ರದೇಶ ವಿಸ್ತರಣೆ ಕಾರ್ಯಕ್ರಮ.<br>• ಪ್ರಾತ್ಯಕ್ಷಿತೆ ತಾಕುಗಳ ನಿರ್ಮಾಣ ಕಾರ್ಯಕ್ರಮ.<br>• ಕ್ಷೇತ್ರೀಯ ತೆಂಗು ನರ್ಸರಿ ಕಾರ್ಯಕ್ರಮ.<br>• ಕೇರಾ ಸುರಕ್ಷಾ ವಿಮಾ ಯೋಜನೆ.<br>• ತೆಂಗು ನರ್ಸರಿ ನಿರ್ಮಾಣ ಕಾರ್ಯಕ್ರಮ.<br>• ತೆಂಗು ಬೆಳೆಗಾರರಿಗೆ ತರಬೇತಿ ಕಾರ್ಯಕ್ರಮ.<br>ಈ ಯೋಜನೆಗಳಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>• ತೆಂಗು ಮರುನಾಟಿ ಹಾಗೂ ಪುನಃಶ್ಚೇತನ ಕಾರ್ಯಕ್ರಮದಡಿಯಲ್ಲಿ ಕಡಿಮ ಇಳುವರಿ ನೀಡುವ/ ಸಂಪೂರ್ಣ ಒಣಗಿರುವ/ ಹಳೆಯ/ ಕೀಟ/ ರೋಗಬಾಧಿತ ತೆಂಗಿನ ಗಿಡಗಳನ್ನು ತೆಗೆದು ಅಧಿಕ ಇಳುವರಿ ನೀಡುವ ಹೈಬ್ರಿಡ್ / ಗಿಡ್ಡ / ಎತ್ತರದ ತಳಿಗಳನ್ನು ನಾಟಿಮಾಡಿ, ಹಳೆಯ ಗಿಡಗಳಿಗೆ ತೇವಾಂಶ ಸಂರಕ್ಷಣೆ ಹಾಗೂ ಸಮಗ್ರ ಪೋಷಕಾಂಶಗಳ ನಿರ್ವಹಣೆಗಾಗಿ ಎರಡು ವರ್ಷಗಳ ಅವಧಿಗೆ ಪ್ರತಿ ಹೆಕ್ಟೇರ್ ಗೆ ರೂ53,500/- ಗಳ ಸಹಾಯಧನವನ್ನು |

| | | |
|---|---|---|
| | | 1ಹೆಕ್ಟೇರ್‌ವರೆಗೆ ನೀಡಲಾಗುತ್ತಿದೆ.<br>• ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಯಲ್ಲಿ ಎತ್ತರ / ಗಿಡ್ಡ / ಸಂಕರಣ ತಳಿಗಳ ಘಟಕ ವೆಚ್ಚದ ಶೇ.25%ರಂತೆ ಗರಿಷ್ಠ 4 ಹೆಕ್ಟೇರ್ ವರೆಗೆ ಪ್ರತಿಫಲಾನುಭವಿಗೆ ಆರ್ಥಿಕ ಸವಲತ್ತನ್ನು ನೀಡಲಾಗುತ್ತಿದೆ.<br>• ತೆಂಗು ನರ್ಸರಿ ನಿರ್ಮಾಣ ಕಾರ್ಯಕ್ರಮದಡಿಯಲ್ಲಿ ತೆಂಗಿನ ಸಸಿಗಳ ಉತ್ಪಾದನೆಗಾಗಿ ಪ್ರತಿಫಲಾನುಭವಿಗೆ ಘಟಕ ವೆಚ್ಚದ ಶೇ.25% ರಂತೆ ಗರಿಷ್ಠ 0.4 ಹೆಕ್ಟೇರ್ ವರೆಗೆ ಆರ್ಥಿಕ ಸವಲತ್ತನ್ನು ನೀಡಲಾಗುತ್ತಿದೆ.<br>• ಕೇರಾ ಸುರಕ್ಷಾ ವಿಮಾ ಯೋಜನೆಯಡಿಯಲ್ಲಿ ನೊಂದಾಯಿಸಲಾದ ತೆಂಗು ಬೆಳೆಗಾರರಿಗೆ ಅಪಘಾತವಾದಲ್ಲಿ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತದೆ.<br>• ರಾಜ್ಯದಲ್ಲಿ ತೆಂಗು ಬೆಳೆಯನ್ನು ಪ್ರಧಾನ ಮಂತ್ರಿ ಫಸಲ್‌ಭೀಮಾ ಯೋಜನೆಯಡಿಯಲ್ಲಿ ಒಳಪಡಿಸಿರುವುದಿಲ್ಲ. |
| | | ಮೇಲ್ಕಂಡ ಎಲ್ಲಾ ಸೌಲಭ್ಯಗಳನ್ನು ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾದ ತುಮಕೂರು, ದಾವಣಗೆರೆ, ಶಿವಮೊಗ್ಗ, ರಾಮನಗರ, ಮಂಡ್ಯ, ಚಿತ್ರದುರ್ಗ, ಉತ್ತರಕನ್ನಡ, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣಕನ್ನಡ ,ಹಾಸನ, ಮೈಸೂರು, ಉಡುಪಿ ಜಿಲ್ಲೆಗಳ ತೆಂಗು ಬೆಳೆಗಾರರಿಗೆ ನೀಡಲಾಗುತ್ತಿದೆ. |
| 3. | ರಾಜ್ಯದಲ್ಲಿ ಈ ಮಂಡಳಿ ವತಿಯಿಂದ ತೆಂಗಿನ ನಾರು ಮುಂತಾದ ಉಪಯುಕ್ತ - ಉಪ ಉತ್ಪನ್ನಗಳಿಂದ ತಯಾರಿಸಲಾಗುವ ಉತ್ಪನ್ನಗಳಿಗೆ ಬೆಂಬಲ ನೀಡಲು ಮಂಡಳಿಯು ರೂಪಿಸಿರುವ ಯೋಜನೆಗಳಾವುವು; ಮತ್ತು ರಾಜ್ಯದಲ್ಲಿ ಈ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗಿದೆಯೇ? | ತೆಂಗು ಅಭಿವೃದ್ಧಿ ಮಂಡಳಿ ವತಿಯಿಂದ ತೆಂಗಿನನಾರು ಮತ್ತು ನಾರಿನ ಉಪಯುಕ್ತ - ಉಪ ಉತ್ಪನ್ನಗಳಿಂದ ತಯಾರಿಸಲಾಗುವ ಉತ್ಪನ್ನಗಳಿಗೆ ಬೆಂಬಲ ನೀಡುವ ಯೋಜನೆಗಳಿರುವುದಿಲ್ಲ. |

HORTI 145 HGM 2022

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು